SCCH – 01
MVC No.146/2022
PW2

**<u>ಸಾಕ್ಷಿಗೆ ದಿನಾಂಕಃ 13.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.ಎಲ್.ಎನ್ ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ.

3) ಅನುಮತಿ ಪತ್ರವನ್ನು **ನಿ.ಪಿ.20** ಎಂದು ಗುರುತಿಸಿದೆ.

4) **Adhichunchanagiri** ಆಸ್ಪತ್ರೆಯಲ್ಲಿ ಇಟ್ಟಿರುವಂತಹ **Accident Register** ರ ಮೂಲ ದಾಖಲೆಯನ್ನು ಮತ್ತು "ಆರಕ್ಷಕರಿಗೆ ತಿಳಿಸುವ ಬಗ್ಗೆ" ಎಂಬ ಹೆಸರಿನ ಮೂಲ ದಾಖಲೆಯನ್ನು

ಮತ್ತು ಇದೇ ದಾಖಲೆಗಳಲ್ಲಿ ದಿ:**31.03.2024** ರಂದು ಇರುವಂತಹ ವಿವರಗಳ ಹಾಳೆಗಳ ಯಥಾ ನಕಲುಗಳನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**21** ಮತ್ತು ನಿ.ಪಿ.**22** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

5) ಓರ್ವ ಉಮೇಶ ಎಂಬ ವ್ಯಕ್ತಿಯು ನಮ್ಮ ಆಸ್ಪತ್ರೆಗೆ ಯಾವಾಗ ದಾಖಲು ಆಗಿದ್ದಾರೆ ಮತ್ತು ಅವರಿಗೆ ಯಾವ ರೀತಿಯ ಗಾಯಗಳು ಆಗಿದ್ದವು ಮತ್ತು ಆತನಿಗೆ ಯಾವ ರೀತಿಯ ಚಿಕಿತ್ಸೆಯನ್ನು ಕೊಡಲಾಗಿದೆ ಎಂಬ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರುವಂತಹ ಒಂದು ಕಡತವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**23** ಎಂದು ಗುರುತಿಸಿದೆ.

**<u>ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಆರ್.ಎ. ವಕೀಲರಿಂದ:</u>**

1) ನಿ.ಪಿ.**21** ರಿಂದ ನಿ.ಪಿ.**23** ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಮ್ಮ ಸಂಸ್ಥೆಯಲ್ಲಿ ಇರುವ ದಾಖಲೆಗಳ ಪ್ರಕಾರ ಅರ್ಜಿದಾರರಾದ ಉಮೇಶ ರವರಿಗೆ ಡಾ.ಬಿ.ಜಿ.ಸಾಗರ್ ರವರು ಚಿಕಿತ್ಸೆಯನ್ನು ನೀಡಿದ್ದಾರೆ ಎಂದು ಕಂಡು ಬರುತ್ತದೆ ಎಂದರೆ ಸರಿ. ಸದರಿ

ಡಾ.ಬಿ.ಜಿ.ಸಾಗರ್ ರವರು ಈಗ ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿಲ್ಲ ಮತ್ತು ಅವರು ಬೇರೆ ಕಡೆ ಹೋಗಿದ್ದಾರೆ. ಸದರಿ ಡಾ.ಬಿ.ಜಿ.ಸಾಗರ್ ರವರ ಸಹಾಯಕರು ಆದಂತಹ ಅಶೋಕ್ ರಕ್ಷಿತ್ ಮತ್ತು ಡಾ.ಪ್ರದೀಪ್ ರವರು ನಮ್ಮ ಆಸ್ಪತ್ರೆಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ.

2) ನಾನು ಈ ದಿನ ಹಾಜರುಪಡಿಸಿರುವ ದಾಖಲೆಗಳಿಗೂ ಮತ್ತು ಅರ್ಜಿದಾರರಾದ ಉಮೇಶ ರವರಿಗೂ ಯಾವುದೇ ಸಂಬಂಧ ಇಲ್ಲ ಮತ್ತು ಅರ್ಜಿದಾರರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ಆ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.